## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ

**OS No**.42/2024

| | | | |
|---|---|---|---|
| **ಹೆಸರು** | ರವೀಂದ್ರ | **ಪಿಡಬ್ಲೂ:** | 02 |
| **ತಂದೆ/ಗಂಡನ ಹೆಸರು** | ಲೇ. ರಾಮೇಗೌಡ ಕೆ | | |
| **ವಯಸ್ಸು** | 50 ವರ್ಷ | | |
| **ಉದ್ಯೋಗ** | ಸರ್ವೇಯರ್ | | |
| **ವಾಸಸ್ಥಳ** | ಕೆ.ಆರ್.ನಗರ | | |

**ದಿಃ 30.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ**

ನಾನು 4 ವರ್ಷಗಳಿಂದ ಪಿರಿಯಾಪಟ್ಟಣ ADLR ಕಚೇರಿಯಲ್ಲಿ ಸರ್ವೇಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಪಿರಿಯಾಪಟ್ಟಣದ ರಾಮಚಂದ್ರ ಎಂಬುವರು ಮೋಜಿನ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿ ಪಿರಿಯಾಪಟ್ಟಣ ತಾಲ್ಲೂಕು, ಹಾರನಹಳ್ಳಿ ಹೋಬಳಿ, ಕೊಪ್ಪ ಗ್ರಾಮದ ಸ.ನಂ.19/11 ರ ಜಮೀನನ್ನು ಅಳತೆ ಮಾಡಿ ಹದ್ದುಬಸ್ತು ಗುರುತಿಸಿ ಕೊಡಬೇಕೆಂದು ಕೋರಿಕೊಂಡಿದ್ದ ಮೇರೆಗೆ ಮೋಜಿನಿ ತಂತ್ರಾಂಶದ ಮೂಲಕ ಬೆಂಗಳೂರಿನ ನಮ್ಮ ಇಲಾಖೆಯ ಮುಖ್ಯ ಕಚೇರಿಯಿಂದ ನಮಗೆ allot ಮಾಡಿದ ಮೇರೆಗೆ ದಿನಾಂಕ 18.08.2022 ರಂದು ಅಳತೆ ಮಾಡುವ ಸಲುವಾಗಿ 7 ದಿನಗಳ ಮುಂಚಿತವಾಗಿ ಆಜು ಬಾಜುದಾರರಾದ ನರಸಿಂಹಯ್ಯ, ಪುಟ್ಟಮ್ಮ, ಶಿವಮ್ಮ, ಗಾಯಿತ್ರಿ, ಸರೋಜಮ್ಮ, ಶ್ರೀನಿವಾಸ, ಗೌರಮ್ಮ, ಬಷೀರ್ ಅಹಮದ್ ಇವರಿಗೆ ನಮ್ಮ ಕಚೇರಿ ಸಹಾಯಕರ ಮೂಲಕ ನೋಟೀಸು ಕೊಡಿಸಲಾಗಿದೆ. ದಿನಾಂಕ 18.08.2022 ರಂದು ನಾವು ಅಳತೆ ಮಾಡಲು ಹೋದಾಗ ಆಜು ಬಾಜುದಾರರು ಗಲಾಟೆ ಮಾಡಿದ ಕಾರಣ ಸರ್ವೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಪೊಲೀಸ್ ರಕ್ಷಣೆಯ ಮೂಲಕ ದಿನಾಂಕ 19.09.2022 ರಂದು ಸರ್ವೆ ಮಾಡಿಸಲು ದಿನಾಂಕ ನಿಗದಿಪಡಿಸಿ ಸಂಬಂಧಪಟ್ಟವರಿಗೆ ರಿಜಿಸ್ಟರ್ ಪೋಸ್ಟ್ ಮೂಲಕ ನೋಟೀಸು ಕಳುಹಿಸಿದ್ದೇವೆ. ಆದರೆ

ಕಚೇರಿಗೆ ತಕರಾರು ಅರ್ಜಿ ಬಂದಿರುತ್ತದೆ. ಆದ್ದರಿಂದ ಆ ದಿನವೂ ಸಹ ಅಳತೆಗೆ ಹೋಗಲಿಲ್ಲ. ಆದ್ದರಿಂದ ತಕರಾರು ಕೊಟ್ಟಿದ್ದ ಮಹದೇವ ಬಿನ್ ಬಸಲಿಂಗಪ್ಪರವರಿಗೆ ADLR ರವರು ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳಿದ್ದರೆ 7 ದಿನಗಳ ಒಳಗೆ ಹಾಜರುಪಡಿಸಬೇಕೆಂದು ಅವರಿಗೆ ನೋಟೀಸು ಕೊಟ್ಟಿದ್ದರು. ಆದರೆ ಯಾವುದೇ ದಾಖಲೆಗಳನ್ನು ಸಲ್ಲಿಸಲಿಲ್ಲ ಪುನಃ ದಿನಾಂಕ 17.10.2022 ರಂದು ಪೊಲೀಸ್ ರಕ್ಷಣೆಯೊಂದಿಗೆ ಸರ್ವೆ ಕಾರ್ಯ ನಡೆಸಲು ದಿನಾಂಕ ನಿಗದಿಪಡಿಸಿ ಆಜುಬಾಜುದಾರರಿಗೆ ನೋಟೀಸು ಕೊಟ್ಟಿದ್ದೇನೆ. ಆ ದಿನ ಸ.ನಂ.19/11 ರ ಜಮೀನನ್ನು ಅಳತೆ ಮಾಡಿ ಗಡಿ ಗುರುತಿಸಿ ಕಲ್ಲುಗಳನ್ನು ಹಾಕಿಸಿ ಅದೇ ದಿನ ಮಹಜರ್ ಮಾಡಿದ್ದೇನೆ. ಆದರೆ ಆಜುಬಾಜುದಾರರು ಮಹಜರ್ ಗೆ ಸಹಿ ಹಾಕಲು ನಿರಾಕರಿಸಿದ್ದಾರೆ ಅರ್ಜಿದಾರರು ಮಾತ್ರ ಸಹಿ ಮಾಡಿದ್ದಾರೆ. ಅಳತೆ ಕಾರ್ಯದಲ್ಲಿ ಸ.ನಂ.19/11 ರಲ್ಲಿ 6 ಜನರು ಒತ್ತುವರಿ ಮಾಡಿರುತ್ತಾರೆ ಸ.ನಂ.19/3 ರವರು ½ ಗುಂಟೆ, ಸ.ನಂ.19/4 ರವರು ¾ ಗುಂಟೆ, ಸ.ನಂ.19/5 ರವರು ¾ ಗುಂಟೆ, ಸ.ನಂ.19/6 ರವರು ¾ ಗುಂಟೆ, ಸ.ನಂ.19/1 ರವರು 1¼ ಗುಂಟೆ, ಸ.ನಂ.19/2 ರವರು 1½ ಗುಂಟೆ ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ನಿ.ಪಿ-7 ರಲ್ಲಿ ಗುರುತಿಸಿರುವಂತೆ ನಾನು ವರದಿ ಕೊಟ್ಟಿದ್ದೇನೆ. ನಂತರ ಸರ್ವೆ ಮಾಡಿರುವ ಬಗ್ಗೆ ಕಡತಕ್ಕೆ ನಮ್ಮ ಮೇಲಾಧಿಕಾರಿಗಳ ಸಹಿ ಪಡೆದು ಕಚೇರಿಗೆ ಸಲ್ಲಿಸಿದ್ದೇನೆ.

**ಮರುವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**